International Journal of Kannada Research
www.kannadajournal.com

ISSN: 2454–5813
IJKR 2017; 3(4): 163-165
© 2017 IJKR
www.kannadajournal.com
Received: 27-08-2017
Accepted: 28-09-2017

**ಮೇಘರಾಜ ಎಂ.ವಾಡಿ**
ಕನ್ನಡ ಸಂಶೋಧನಾ ವಿದ್ಯಾರ್ಥಿ
ನೃಪತುಂಗ ಸಂಶೋಧನಾ ವಿದ್ಯಾರ್ಥಿಗಳ
ವಸತಿ ನಿಲಯ
ರೂ.ನಂ: ೪೯

**Correspondence**
**ಮೇಘರಾಜ ಎಂ.ವಾಡಿ**
ಕನ್ನಡ ಸಂಶೋಧನಾ ವಿದ್ಯಾರ್ಥಿ
ನೃಪತುಂಗ ಸಂಶೋಧನಾ ವಿದ್ಯಾರ್ಥಿಗಳ
ವಸತಿ ನಿಲಯ
ರೂ.ನಂ: ೪೯

# ಶರಣರ ದೃಷ್ಟಿಯಲ್ಲಿ ಆಸೆಯ ಕುರಿತ ನಿಲುವು

**ಮೇಘರಾಜ ಎಂ.ವಾಡಿ**

೧೨ನೇ ಶತಮಾನದ ಶರಣರ ವಚನಗಳು ನಿಜಕ್ಕೂ ಅತ್ಯಮೂಲ್ಯವಾದವುಗಳು. ಒಂದೊಂದು ವಚನದಲ್ಲಿ ಜೀವನದ ಸಂದೇಶಗಳಿವೆ, ಮಾನವ ಜೀವನದ ಅಂತಃಕರಣವಿದೆ. ಮಾನವೀಯ ಮೌಲ್ಯಗಳಿವೆ, ಜೀವನದ ಅರುಹು ಕುರುಹುಗಳಿವೆ. ಅನೇಕ ಶರಣರು ಆಸೆ ಎಂಬ ಸಾರದ ತತ್ವವನ್ನು ತಮ್ಮ ವಚನಗಳಲ್ಲಿ ಮಾರ್ಮಿಕವಾಗಿ ವಿವರಿಸಿದ್ದಾರೆ. ಹುಟ್ಟಿದ ಮನುಷ್ಯ ಸಾಯಲೇ ಬೇಕು ಹುಟ್ಟಿದ ಪ್ರತಿಯೊಬ್ಬ ಮನುಷ್ಯರಿಗೂ ಆಸೆ ಇದ್ದೆ ಇರುತ್ತದೆ. ಆಸೆಗೆ ಕೊನೆ ಇಲ್ಲ ಆದರೆ ಬಾಳಿಗೆ ಕೊನೆ ಇದೆ. ಮನುಷ್ಯನಾಗಿ ಹುಟ್ಟಿದ ಮೇಲೆ ತನ್ನ ಸ್ವಾರ್ಥಕ್ಕಾಗಿ ಬದುಕದೆ ಇನ್ನೊಬ್ಬರ ಕಷ್ಟ ಸುಖದಲ್ಲಿ ಭಾಗಿಯಾಗಬೇಕು ಎಂಬುದು ಶರಣರ ಪ್ರಮುಖ ಧ್ಯಯ್ಯವಾಗಿದೆ ಆಸೆಗಳು ಮನುಷ್ಯನನ್ನೇ ಒಂದೇ ಸಾರಿ ಸುಡದೆ ದಿನೆ–ದಿನೆ ಸುಡುತ್ತವೆ. ಆಸೆಯ ಬೆನ್ನ ಹತ್ತದೆ ಜೀವನದಲ್ಲಿ ಇದ್ದರಲ್ಲಿಯೇ ಸಂಸಾರ ಎಂಬ ರಥವನ್ನು ಎಳೆಯ ಬೇಕು ಅಂದಾಗ ಮಾತ್ರ ಜೀವನವು ನಂದನವನದಂತೆ ಯಾವಾಗಲು ಹಚ್ಚು ಹಸಿರಾಗಲು ಸಾಧ್ಯ.
ವಿಶ್ವ ಗುರು ಬಸವಣ್ಣನವರು ಆಸೆಯ ಬಗ್ಗೆ ಈ ಕೆಳಗಿನ ವಚನದಲ್ಲಿ ಈರೀತಿ ನಿವೇದಿಸಿಕೊಳ್ಳುವರು.

ಆಸೆಯಾಮಿಷ ತಾಮಸದಿಂದ ಭವಬಂಧನವಾದುದನರಿಯಾ
ತ್ರಿವಿಧ ತ್ರಿವಿಧಾವಸ್ಥೆಯ ಮರೆಯಾ
ಓಂ ನಮಃ ಶಿವಾಯ ಶರಣೆಂಬುದು ಬಿಡದೆ ನೆನೆಯಾ ಮನವೆ
ಆಸೆಯೆಂಬ ಪಾಶದಲ್ಲಿ ಭವಬಂಧನನಾಗಿರ್ದೆನಯ್ಯಾ
ಸಕೃತು ನಿಮ್ಮ ನೆನಯಲು ಎನಗೆ ತೆರಹಿಲ್ಲನಯ್ಯಾ
ಆಸೆ ಇಚ್ಛೆಗೆನ್ನಗಾಸಿ ಮಾಡದಿರಯ್ಯ
ದಾಸೋಹಿಯಾಗಿರ್ಪ ದಾಸನಾಗಿರಸೆನ್ನ
ಕೂಡಲ ಸಂಗಮದೇವಾ ನಿಮ್ಮ ಧರ್ಮ

ಈ ವಚನದಲ್ಲಿ ಆಸೆ ಆಮಿಷ ತಾಮಸದಿಂದ ಮನುಷ್ಯ ಭವ ಬಂಧನಕ್ಕೆ ಒಳಗಾಗುತ್ತಾನೆ. ಆಸೆಯೆಂಬುದು ಒಂದು ಬಂಧನ ಆ ಬಂಧನವು ಮನುಷ್ಯನನ್ನು ಭವಬಂಧನದಲ್ಲಿ ಸಿಲುಕಿಸುತ್ತದೆ. ಆಗ ಮನುಷ್ಯ ದೇವರನ್ನು ಮರೆತು ಬಿಡುತ್ತಾನೆ. ಆಗ ಅವನಿಗೆ ದೇವರನ್ನು ನೆನೆಯಲು ಕೂಡ ಅವಕಾಶವಿಲ್ಲದಂತಾಗುತ್ತದೆಂಬುದನ್ನು ಹೇಳುತ್ತಾ ಅವರು ಕೂಡಲಸಂಗಮದೇವಾ ನೀವು ದಯಮಾಡಿ ನನ್ನನ್ನು ಆಸೆ ಇಚ್ಛೆಗೊಳಪಡಿಸಿ ಗಾಸಿಮಾಡದೇ ಸದಾಕಾಲವೂ ದಾಸೋಹಿಯಾಗಿರ್ಪ ನಿಮ್ಮ ದಾಸನನ್ನಾಗಿರಿಸು ಎಂದು ಅನನ್ಯವಾಗಿ ಬೇಡಿಕೊಂಡು ಹಾಗೆ ನಮ್ಮನ್ನು ಲೌಕಿಕ ಆಸೆ ಆಕಾಂಕ್ಷೆಗಳಿಂದ ಮುಕ್ತಿಗೊಳಿಸಿ ಅನುದಿನವು ದೇವರ ಸಾನಿಧ್ಯದಲ್ಲಿರುವಂತೆ ಮಾಡು ಎಂದು ಪ್ರಾರ್ಥಿಸುವರು.
ಗುಹೇಶ್ವರ ಎಂಬ ಅಂಕಿತದಿಂದಲ್ಲೆ ಪ್ರಸಿದ್ಧಿ ಪಡೆದ ಅಲ್ಲಮಪ್ರಭು ಒಂದು ವಚನದಲ್ಲಿ ಆಸೆಯುಳ್ಳಾತ ಶರಣನಲ್ಲ ಆಸೆ ನಿಜವಾದ ಶರಣರಲ್ಲಿ ಇರಬಾರದು ಎಂಬುದು ಅವರ ಬಯಕೆಯಾಗಿತ್ತು.
ಆಸೆ ಮನುಷ್ಯಬನನ್ನು ವಿನಾಶಕ್ಕೆ ತಳ್ಳುತ್ತದೆ ಅಧೋಗತಿಗೆ ಕೊಂಡೊಯ್ಯುತ್ತದೆ ಎಂಬುದನ್ನು ಸಹ ಅಲ್ಲಮಪ್ರಭುದೇವರು ಅಭಿಪ್ರಾಯಪಟ್ಟಿದ್ದಾರೆ.

ಆಸೆಗೆ ಸತ್ತುದು ಕೋಟಿ, ಆಮಿಷಕ್ಕೆ ಸತ್ತುದು ಕೋಟಿ
ಹೆಣ್ಣು ಹೊನ್ನು ಮಣ್ಣಿಂಗೆ ಸತ್ತುದು ಕೋಟಿ
ಗುಹೇಶ್ವರ, ನಿಮಗಾಗಿ ಸತ್ತವರನಾರನೂ ಕಾಣೆ

ಮನುಷ್ಯನ ಆಸೆಗೆ ಕೊನೆಯೆಂಬುದು ಇಲ್ಲ, ಇಂದ್ರಿಯಗಳು ಬಯಸುವ ಆಸೆಗಳು ಅನೇಕ ಮನಸ್ಸು ಇಚ್ಛಿಸುವಬಯಕೆಗಳು ವಿವಿಧ ಆಸೆಗಳನ್ನು ಪೂರೈಸಬೇಕೆಂದು ತಮ್ಮ ಜೀವನಾವಧಿ ಶ್ರಮಿಸಿದವರು, ಕೋಟಿ

ಇಂದ್ರಿಯಳಿಗೆ ಸುಖವನ್ನು ಒದಗಿಸುವ ಭೋಗವಸ್ತುಗಳ ಸಂಪಾದನೆಗೆ ತಮ್ಮ ಬದುಕನ್ನೇ ಧಾರೆಯೆರೆದವರು ಸಂಸಾರದ ವಿಷಯಸುಖಕ್ಕಾಗಿ ಸತ್ತವರಿದ್ದಾರೆ ಕೋಟಿ, ಕೋಟಿ ಸಂಖ್ಯೆಯಲ್ಲಿ ಆದರೆ ಗುಹೇಶ್ವರ ನಿನಗಾಗಿ ಸತ್ತವರನ್ನು ಯಾರನ್ನು ಕಾಣಲಿಲ್ಲ ಎಂದು ಅಲ್ಲಮಪ್ರಭು ಹೇಳಿದ್ದಾರೆ. ಈ ಪ್ರಪಂಚದಲ್ಲಿ ಆಸೆಗಳನ್ನು ಪೂರೆಸಿಕೊಳ್ಳುವುದರಲ್ಲಿ ಜನರು ಸತ್ತಿದ್ದಾರೆ. ಹೆಣ್ಣು, ಹೊನ್ನು ಮಣ್ಣುಗಳಿಗಾಗಿ ಕೋಟಿ–ಕೋಟಿ ಜನರು ಸತ್ತಿದ್ದಾರೆ. ಆದರೆ ಪರಮಾತ್ಮನ ಚಿಂತನೆಯಲ್ಲಿ ಮಗ್ನರಾದವರನ್ನು ನಾ ಕಂಡಿಲ್ಲ ಎಂದು ಅಲ್ಲಮಪ್ರಭು ಆಶ್ಚರ್ಯ ಪಟ್ಟಿದ್ದಾರೆ.

ಇನ್ನೊಬ್ಬ ಪ್ರಮುಖ ವಚನಗಾರ್ತಿ ಅಕ್ಕಮಹಾದೇವಿ ಆಸೆ ಲೋಕೋತರ್ತವಾಗಿದ್ದರೂ ಲೌಕಿಕರ ಆಸೆಯ ಗಾಸಿಗೊಳಗಾಗಿ ನೊಂದಿದ್ದಾಳೆ ಕೊನೆಗೆ ಆಸೆ ಹಂಬಲ ಅಳಿದು ಶರಣರ ಸಂಗದಿಂದ ಬದುಕಿದುದಾಗಿ ಹೇಳಿದ್ದಾಳೆ

ಆಸೆಯಾಮಿಷವಳಿದು ಹುಸಿವಿಷಯಂಗಳೆಲ್ಲ ಹಿಂಗಿ
ಸಂಶಯ ಸಂಬಂಧ ವಿಸಂಬಂಧವಾಯಿತ್ತು ನೋಡಾ
ಎನ್ನಮನದೊಳಗೆ ಪರಿಣಾಮವ ಕಂಡು
ಮಗ್ನಮಗ್ನವಾಯತ್ತಯ್ಯಾ ಚೆನ್ನಮಲ್ಲಿಕಾರ್ಜುನಾ
ನಿಮ್ಮ ಶರಣಪ್ರಭುದೇವರ ಕರುಣದಿಂದ ಬದುಕಿದೆನಯ್ಯಾ

ಆಸೆ ಆಮಿಷಗಳು ಅಳಿದು ರಕ್ತಸಂಬಂಧ ಬಂದು ಬಳಗ ನಾನು ನನ್ನದೆಂಬ ಸಂಸಾರಿಕ ಸಂಬಂಧಿತ ವಿಷಯಗಳೆಲ್ಲವೂ ಹುಸಿಯಾದಂತವುಗಳು ಮಾಯಾಸ್ವರೂಪವಾದವುಗಳು ಅವುಗಳ ಸಂಬಂಧ ವಿಸಂಬಂಧವಾಗಿ ತನ್ನ ಮನದೊಳಗೆ ನಿಜವನ್ನರಿತು ಮನ ಮಗ್ನವಾದಾಗ ಪರಮಗತಿ ಚೆನ್ನಮಲ್ಲಿಕಾರ್ಜುನನ ಶರಣ ಪ್ರಭುದೇವರ ಕರುಣದಿಂದ ಪಡೆದು ಜೀವಿಸಿದೆನೆಂದು ಹೇಳುತ್ತಾಳೆ.

ಮಾನವ ಎಲ್ಲಿಯವರೆಗೆ ಸಂಸಾರದ ಸುಳಿಯಲ್ಲಿ ಸಿಕ್ಕಿ ಬಿಳುತ್ತಾನೋ ಅಲ್ಲಿಯವರೆಗೆ ಈ ಜಗದ ಭೋಗ ಭಾಗ್ಯಗಳಲ್ಲಿ ವ್ಯಾಮೋಹವುಳ್ಳವನಾಗಿರುತ್ತಾನೋ ಅಲ್ಲಿಯವರೆಗೆ ಆಸೆ ತೊಲಗದು. ಇವೆ ಆಸೆಯ ಮೂಲಗಳು ಎಂದು ಕರ್ಮಯೋಗಿ ಸಿದ್ಧರಾಮ ಈರೀತಿ ಹೇಳಿದ್ದಾನೆ.

ಈ ಆಸೆಯೆಂಬವಳು ವಾಹಿಗೊಟ್ಟಿಗೆಗಳಂಕಟ್ಟಿಸಿ
ನದಿಯೊಳಗಂ ಪೊಗಿಸಿ ಪರದೇಶಕ್ಕ ನೂಂಕುವಳು
ಈ ಆಸೆಯೆಂಬ ಪಾತಕಿಯಿಂದವೆ ನಿಮ್ಮೆಡೆ ಗಾಣದಿಪ್ಪೆನು
ಈ ಆಸೆಯೆಂಬ ಪಾತಕಿಯನೆಂದಿಂಗೆ ನೀಗಿ
ಎಂದು ನಿಮ್ಮನೊಡಗೂಡಿ ಬೇರಾಗದಿಪ್ಪೆನೊ
ಹೇಳಾ ಕಪಿಲಸಿದ್ಧಮಲ್ಲಿಕಾರ್ಜುನ

ಆಸೆಯೆಂಬ ಮಾನವನ್ನು ಹೊಕ್ಕಳೆಂದರೆ ನೀರಿನಲ್ಲಿ ಚಲಿಸುವ ಮನೆಯನ್ನು ಕಟ್ಟುವಂತೆ ಮಾಡಿ ನದಿ ಸಮುದ್ರಗಳೆನ್ನದೆ ಅವುಗಳಲ್ಲಿ ನೂಂಕಿಸಿ ಪರದೇಶಕ್ಕೆ ಕೊಂಡೊಯ್ಯುವಳು. ಅಂದರೆ ನಿಂತಲ್ಲಿ ನಿಲ್ಲದಂತೆ ಮಾಡುವಳು, ಚಂಚಲಚಿತ್ತನನ್ನಾಗಿ ಮಾಡುವಳು ಇಂಥ ಆಸೆಯ ಪಾತಕಿಯಿಂದಾಗಿ ನಾನು ನಿಮ್ಮ ಇಹವನ್ನು ಕಾಣದಾಗಿದ್ದೇನೆ. ಈ ಪಾತಕಿಯನ್ನು ನೀಗಿ ನಾನು ಎಂದೆಂದೂ ನಿನ್ನನು ಅಗಲದಂತೆ ಇರುವೆನು ಹೇಳು ಕಪಿಲಸಿದ್ಧಮಲ್ಲಿಕಾರ್ಜುನ ಎಂದು ತನ್ನ ಹಂಬಲ ವ್ಯಕ್ತಪಡಿಸಿದ್ದಾರೆ.

ಆಯ್ದಕ್ಕಿ ಲಕ್ಕಮ್ಮ ಮಾನವನಿಗೆ ಯಾವ ರೀತಿ ಆಸೆಯಿರಬೇಕು ಎನ್ನುವದು ಈ ವಚನದ ಮೂಲಕ ವ್ಯಕ್ತಪಡಿಸಿದ್ದಾಳೆ.

ಆಸೆಯೆಂಬುದು ಅರಸಿಂಗಲ್ಲದೆ
ಶಿವಭಕ್ತರಿಗುಂಟೆ ಅಯ್ಯಾ
ರೋಷವೆಂಬುದು ಯಮಧೂತರಿಗಲ್ಲದೆ
ಅಜಾತರಿಗುಂಟೆ ಅಯ್ಯಾ?
ಈ ಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ
ಮಾರಯ್ಯ ಪ್ರೀಯ ಅಮರೇಶ್ವರ ಲಿಂಗಕ್ಕೆ ಸಲ್ಲದ ಬೋನ
ಅಲ್ಲಿಯೇ ಸುರಿದು ಬನ್ನಿ ಮಾರಯ್ಯಾ

ಈ ವಚನದಲ್ಲಿ ರಾಜನಾದವನಿಗೆ ಆಸೆ ಇರುತ್ತದೆ. ತನ್ನ ಸಾಮ್ರಾಜ್ಯವನ್ನು ವಿಸ್ತರಿಸಬೇಕು, ಕೋಟೆ –ಕೊತ್ತಲಗಳು ವಶಪಡಿಸಿಕೊಳ್ಳಬೇಕು ಎಂದು ಶಿವಭಕ್ತರಲ್ಲಿ ತಾನೊಬ್ಬ ಉಂಡು ಉಟ್ಟು ಸುಖಿಯಾಗುವುದಕ್ಕಿಂತ ಸಮಾಜದಲ್ಲಿ ಜೀವಿಸುವ ಪ್ರತಿಯೊಬ್ಬ ಜೀವಿಗೂ ನೆಮ್ಮದಿಯಿಂದ ಬದುಕಲು ಅವಕಾಶ ಕೊಡಬೇಕೆಂಬುದು ಲಕ್ಕಮ್ಮಳ ವಿಚಾರ ಶಿವಭಕ್ತರಿಗೆ ನಾಳೆಯ ಆಸೆ ಇರಬಾರದು ಅದು ಆ ಪರಮಾತ್ಮನಿಗೆ ಸಲ್ಲುವುದಿಲ್ಲವೆಂದು ಹೇಳುವುದರ ಮೂಲಕ ಗಂಡ ತಂದ ಅಕ್ಕಿಯನ್ನು ತಿರಸ್ಕರಿಸಿ ಇವತ್ತಿನದಷ್ಟನ್ನೇ ಇಟ್ಟುಕೊಂಡು ಹೆಚ್ಚಾದುದು.

ಅಲ್ಲಿಯೇ ಸುರಿದು ಬರಲು ಹೇಳುತ್ತಾಳೆ ತನಗೆ ಅವಶ್ಯಕವಾದಷ್ಟನ್ನು ಮಾತ್ರ ಪ್ರತಿಯೊಬ್ಬನು ತೇಗೆದುಕೊಂಡರೆ ಯಾರಿಗೂ ಕೊರತೆ ಇರುವುದಿಲ್ಲ. ಇದು ಕಾಯದ ನಿಜವಾದ ಅರ್ಥ ಮಾನವನ ಅತಿ ಆಸೆ ನಾಶವಾಗಿ ಸ್ವಾರ್ಥಿ ಆಗುವುದಿಲ್ಲ ನಿಸ್ವಾರ್ಥಿವಾಗುತ್ತಾನೆ.

ಅಂಬಿಗರ ಚೌಡಯ್ಯನ ದೃಷ್ಟಿಯಲ್ಲಿ ಅಸೆ ಇನ್ನು ವಿಶಿಷ್ಟವಾದುದಾಗಿದೆ. ಭೋಗವು ಆಸೆಗೆ ದಾಸನಾಗಿರುವುದು ಆಸೆ ಅನಂತ ದುಃಖಗಳನ್ನು ತರುವುದು.

ಆಸೆಯುಳ್ಳಾತನೊಬ್ಬರಾಧೀನದಲಿಪ್ಪನು
ಆಸೆಯ ಮನೆಯ ಕೊನೆಯನನರಿದಾತ
ಕೈಲಾಸದಾಚೆಯಲ್ಲಿಪ್ಪನೆಂದಾತ
ನಮ್ಮ ಅಂಬಿಗರ ಚೌಡಯ್ಯ

ಆಸೆಯನ್ನು ಕುರಿತು ಅಂಬಿಗರ ಚೌಡಯ್ಯ ಸಹಜ ನೇರವಾಗಿ ಸ್ಪಷ್ಟ ನುಡಿಗಳಲ್ಲಿ ಹೇಳಿದ್ದಾನೆ. ಆಸೆಯೆಂಬುದು ಕೆಟ್ಟದ್ದು. ಅದಕ್ಕೆ ಬಲಿಯಾದವರು ಅದರ ಪೂರೈಕೆಗಾಗಿ ಹಲವಾರು ಇನ್ನೊಬ್ಬರ ದಾಸನಾಗಬೇಕಾಗುತ್ತದೆ. ಆಸೆಯನ್ನು ಗೆಲ್ಲುವುದು ಎಂದರೆ ಮನದ ಮಿತಿಯನ್ನು ನಿಯಂತ್ರಿಸುವುದು ಮನವನ್ನು ಗೆಲ್ಲುವ ಕ್ರಿಯೆಯೇ ಮಹತ್ವದ ಪೂಜೆಯಾಗಿದೆ. ಇದು ಕೈಲಾಸಗಳಿಗಿಂತ ಹೆಚ್ಚಿನ ಸಾಧನೆ ಎನ್ನುತ್ತಾನೆ. ಯಾವನು ಆಸೆಯ ಮೂಲ ಮತ್ತು ಕೊನೆಯನ್ನರಿತಿರುತ್ತಾನೋ ಅಂಥವನು ಕೈಲಾಸದಾಚೆಯಲ್ಲಿ ದೇವರ ದೇವನಾಗಿರುತ್ತಾನೆಂದು ಹೇಳಬಹುದಾಗಿದೆ.

ಮೊಳಿಗೆಯ ಮಾರಯ್ಯ ಆಸೆಯ ಬಗ್ಗೆ ತನ್ನ ವಚನದ ಮೂಲಕ ಸಮಾಜಕ್ಕೆ ಸಾರಿದ್ದಾನೆ.

ಆಸೆಯೆಂಬ ಕೊಳದಲ್ಲಿದ್ದು, ನಿರಾಶೆಯ ನಿರ್ನಾಮವಬಲ್ಲರೇ?
ದೋಷದೂರ ಒನಿರ್ಜಾತನು ನೀನೆ ನಿಃಕಳಂಕ ಮಲ್ಲಿಕಾರ್ಜುನ

ಸಂಸಾರವೆಂಬುದು ಆಸೆಯೆಂಬ ಕೊಳದಂತಿರುವುದು ಅಂಥ ಆಸೆಯೆಂಬ ಸಂಸಾರಕೊಳದಲ್ಲಿದ್ದು ನಿರಾಶೆಯತನ್ನು ನಾಮನಿರ್ದೇಶರಹಿತನೂ ಆದುದಾದರೆ ಅವನು ಪ್ರಾಪಂಚಿಕ ದೋಷದೂರನಾಗಿ ಪರಮನೇ ಆಗುವನು.

ಸ್ವತಂತ್ರ ಸಿದ್ಧಲಿಂಗೇಶ್ವರ ಅಸೆಯೆಂಬ ಸ್ತ್ರೀಯ ವ್ಯಾಮೋಹಕ್ಕೊಳಗಾದವರನ್ನು ಅವಳು ಎಂಥೆಂಥ ಸ್ಥಿತಿಗತಿಗೀಡು ಮಾಡುವಳೆಂಬುದನ್ನು ಬಹಳ ಸರಳವಾಗಿ ಹೇಳುತ್ತಾರೆ.

ಆಸೆಯೆಂಬ ವೇಶಿ ಆರನಾದರೂ ತನ್ನತ್ತಕರೆವಳು
ಈ ಆಸೆಯೆಂಬವಳು ಆರನಾದಡೆಯಾ ಘಾಸಿಮಾಡಿ
ತನು ಮನವ ವ್ಯಯವ ಮಾಡುವಳು
ಈ ಆಸೆಯೆಂಬ ವೇಶ್ಯೆಗೆ ಒತ್ತೆಯ ಕೊಡದ
ನಿರಾಶಿಗಳೆಂಬವರನಾರನೂ ಕಾಣೆ
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ

ಅಕ್ಕಮಹಾದೇವಿಯ ಆಸೆಯನ್ನು ಕುರಿತು ತಮ್ಮ ಅಭಿಪ್ರಾಯವನ್ನು ಪುಣ್ಯಸ್ತ್ರೀಲಿಂಗಮ್ಮನು ಕೂಡ ಹೇಳುವಳು.

ಆಸೆಯುನಳಿದು ರೋಷವ ನಿಲ್ಲಿಸಿ
ಜಗದ ಪಾಶವ ಹರಿದು
ಜಗದ ಹೇಸಿಗಳೆತ್ತ ಬಲ್ಲರು
ಅಪ್ಪಣ್ಣ ಪ್ರೀಯ ಚನ್ನಬಸವಣ್ಣ

ಆಸೆ ಸೊಂಕು ಲವಲೇಶವು ಇಲ್ಲದಂತವರಾಗಿ ರೋಷವನ್ನು ಬಿಟ್ಟುವರಾಗಿ ಇಹಲೋಕದ ಸಂಸಾರಿಕ ವ್ಯಾಮೋಹದ ಬಂಧನದಿಂದ ಮುಕ್ತರಾಗಿ ದೇವರೆನಿಸಿಕೊಂಬ ಶರಣರನ್ನು ಈ ಜಗದ ಹೇಸಿಗಳು ತಿಳಿಯಲಾರದು ಎಂದು ಲಿಂಗಮ್ಮ ಸಾರಿದಳು.
ಆಸೆಯ ಬಗ್ಗೆ ಸುಂಕದ ಬಂಕಣ್ಣ ತನ್ನ ನಿಲುವು ಹೇಳಿದ್ದಾನೆ.

ಆಸೆಯೆಂಬ ಕತ್ತೆಯ ಮೇಲೆ ಮೂಸತನವೆಂಬ ಸೆಟ್ಟಿವೇಷ
ವೇಷಲಾಂಛನದ ಚಿತ್ತವಾಸದ ಪಾಶವನೆತ್ತಿ
ಈಶನರಿಯದ ಸೆಟ್ಟಿ ವಿಷಕ್ಕಾಗಿ ಕೈಯಾಂತು
ತನ್ನ ವ್ಯವಹಾರಕ್ಕೆ ನಷ್ಟ ಬಂದಿತ್ತು
ಬಂಕೇಶ್ವರಲಿಂಗಕ್ಕೆ ಲಾಭವಾಯಿತು.

ಜೀವಿಯು ತನ್ನ ನಿಜಜೀವನವನ್ನು ಮರೆತು ಆಸೆಯೆಂಬ ಕತ್ತೆಯ ಮೇಲೆ ಮನ್ಮಥ ವೇಷಧಾರಿ ಸೆಟ್ಟಿಯಾಗಿ ಕುಳಿತು ವೇಷಲಾಂಚವನ ಹೊತ್ತು ಇಂದ್ರಿಗಳ ಸೆಳೆತಕ್ಕೆ ಸಿಕ್ಕು ಪರಶಿವನನ್ನರಿಯದವನಾಗಿ ಈ ಸಂಸಾರಿಕ ವಿಷಯಗಳಿಗೆ ಆಶಿಸಿ ಕೈಚಾಚಿ ನಿಜವನ್ನರಿಯದೆ ಹಾಳಾದನೆಂಬುದೇ ಈ ವಚನಾದ ಸಾರ.
ಮನುಷ್ಯನಾಗಿ ಹುಟ್ಟಿದ ಮೇಲೆ ಆಸೆ ಇರಬಾರದು ಸತ್ತ ಮೇಲೆ ನಮ್ಮ ಜೊತೆಗೆ ಏನು ಬರುವುದಿಲ್ಲ ಮನುಷ್ಯನ ಬದುಕು ನೀರಿನ ಮೇಲಿನ ಗುಳ್ಳೆಯಂತೆ, ಹುಟ್ಟಿದ ಪ್ರತಿಯೊಂದು ಜೀವಿಯೂ ಆಸೆಯಿಲ್ಲದೆಯಿರಲಾರದು ಮಾನವ ಹುಟ್ಟುತ್ತಲೇ ಆಸೆಯನ್ನು ಬೆನ್ನಿಗೆ ಕಟ್ಟಿಕೊಂಡು ಬಂದಿದ್ದಾನೆ. ಬೆಳೆದರತೆ ಪರಿಸರಕ್ಕೆ ಒಳಗಾಗಿ ಸಂಸಾರಕ್ಕೆ ಪಕ್ಕಾಗಿ ತನ್ನ ಆಸೆಯನ್ನು ಸಂಸ್ಕಾರಗೊಳಿಸಿಕೊಂಡು ಅದನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ವಿವೇಚನಾಯುತನಾಗಿ ಜೀವನ ಸಾಗಿಸಬೇಕು ಎಂದು ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ, ಸಿದ್ಧರಾಮ, ಲಕ್ಕಮ್ಮ, ಅಂಬಿಗರ ಚೌಡಯ್ಯ, ಮೊಳಿಗೆ ಮಾರಯ್ಯ ಮೊದಲಾದ ವಚನಕಾರರು ಸಾರಿ ಸಾರಿ ಹೇಳಿದ್ದಾರೆ ಹಾಗಾಗಿ ಈ ಎಲ್ಲ ಶರಣರ ವಚನಗಳು ಮಾನವನ ಜೀವನದ ಮೇಲೆ ಬೇಳಕು ಚೆಲ್ಲುವಂತವುಗಳು.

**ಆಧಾರ ಗ್ರಂಥಗಳು**

1. ‘ಭವದ ಬೀಜ’ – ದೊಡ್ಡಬಸಪ್ಪ ಬಳೂರಗಿ. (ಪ್ರಭು ಪ್ರಕಾಶನ – ೨೦೦೪).
2. ಅಲ್ಲಮ ಪ್ರಭು ಜೀವನ ಚರಿತ್ರೆ – ಅಂಬಾರಾಯ ಎಸ್.ಹಾಗರಗಿ (ಶರಣ ಪ್ರಕಾಶನ ಗುಲಬರ್ಗಾ ೨೦೧೦).
3. ಆಯ್ದಕ್ಕಿ ಮಾರಯ್ಯ – ಲಕ್ಕಮ್ಮ – ಡಾ.ಮೀನಾಕುಮಾರಿ ಪಾಟೀಲ (ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ೨೦೧೨).